O.S. ನಂಬರಃ 49/2018

ಪಿ. ಡಬ್ಲ್ಯೂ: 3

ದಿಃ13-09-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ</u> ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ರವರರಿಂದಃ

ನಾನು ದಾವಾ ಜಮೀನಿಗೆ 2 ಸಲ ಭೇಟಿ ಕೊಟ್ಟಿರುತ್ತೇನೆ. ನಾನು ನನ್ನ ವರದಿಯಲ್ಲಿ ಆವಾರದ ಪಾಗಾರಿಗೆ ದಣಪೆಗಳು ಇರುತ್ತವೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಜಮೀನಿನ ಗಡಿ ತಜ್ಞರು ಇರುವುದಿಲ್ಲ ಎಂದರೆ ಸರಿ. ನಾನು ಅಲ್ಲಿ ಭೇಟಿಕೊಟ್ಟಾಗ ನೋಡಿ ವರದಿ ಮಾಡಿರುತ್ತೇನೆ ಎಂದರೆ ಸರಿ. ವರದಿಯಲ್ಲಿ ಸರ್ವೆ ಗಡಿ ಹಾಗೂ ವಹಿವಾಟಿ ಗಡಿ ಬಗ್ಗೆ ಬರೆದಿರುವುದಿಲ್ಲ. ಮಣ್ಣಿನ ದಿನ್ನೆಯನ್ನು ಸರ್ವೆ ಗಡಿ ಇರುತ್ತದೆಯೂ ಅಥವಾ ವಹಿವಾಟಿ ಗಡಿ ಮೇಲೆ ಇರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಕಮೀಷನ್ ವರದಿಯಲ್ಲಿ ನಿವೇನಾದರೂ ಸರ್ವೆ ಗಡಿ ಹಾಗೂ ವಹಿವಾಟಿ ಗಡಿಯ ಡಿಸ್ಟೆನ್ಸನ್ನು ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ತೋರಿಸಿರುವುದಿಲ್ಲ, ಗಡಿ ಕಲ್ಲು ಇದ್ದಿದ್ದರ ಬಗ್ಗೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ನಾನು ದಾವಾ ಜಮೀನಿನ ಮೂಲ ದಾವಾ ನಂ.6/2004 ಕ್ಕೆ ಸಂಬಂಧಪಟ್ಟು ಭೇಟಿ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಕೊನೆಯದಾಗಿ ಭೇಟಿ ಕೊಟ್ಟ ನಂತರ ಅಂದರೆ 2004 ನೇ ಸಾಲಿನ ನಂತರ ದಾವಾ ಜಮೀನಿನಲ್ಲಿ ಏನೇನು ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಾನು ಸಲ್ಲಿಸಿದ ವರದಿಗೆ ಅನುಗುಣವಾಗಿ ಮಾತ್ರ ಸಾಕ್ಷ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ನಾನು ದಾವಾ ಜಮೀನಿಗೆ ಭೇಟಿ

ಕೊಟ್ಟಾಗ  ವಾದಿ, 5 ಮತ್ತು 6 ನೇ ಪ್ರತಿವಾದಿಯರನ್ನು ಬಿಟ್ಟರೆ ಬೇರೆ ಯಾರೂ  ಇರಲಿಲ್ಲ. 6 ನೇ ಪ್ರತಿವಾದಿಯರನ್ನು ಬಿಟ್ಟು ಬೇರೆ ಪ್ರತಿವಾದಿಯರು ಮನೆ ಕಟ್ಟಿದ್ದರ ಬಗ್ಗೆ ಮತ್ತು ಖರೀದಿ ಕೊಟ್ಟಿದ್ದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.  6 ನೇ ಪ್ರತಿವಾದಿಯನ್ನು ಬಿಟ್ಟು ಉಳಿದ ಪ್ರತಿವಾದಿಯರು ಈಗ ದಾವಾ ಜಮೀನನ್ನು ಖರೀದಿ ಮಾಡಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ  ಗೊತ್ತಿರುವುದಿಲ್ಲ.  ನಾನು ಸಾಕ್ಷಿ ಹೇಳುವ ಮೊದಲು ನಾನು ಸಲ್ಲಿಸಿದ ವರದಿಯನ್ನು ಪರಿಶೀಲನೆ ಮಾಡಿರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,  ಅಂಕೋಲಾ.